ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಗೃಹ

ಪತ್ರಿಕೆಯ ಹೆಸರು : NAME OF THE NEWS PAPER : ಉದಯವಾಣಿ ದಿನಾಂಕ : DATE : 4/11/2019

# ಯತ್ನಾಳ ವಿರುದ್ಧ ಹತ್ಯೆ ಸಂಚು ಆರೋಪ

4/11/19

ವಿಜಯಪುರ: ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಪೊಲೀಸರ ಮೂಲಕ ನನಗೆ ಹಿಂಸೆ ನೀಡುತ್ತಿದ್ದಾರೆ. ಹೀಗಾಗಿ ನನ್ನ ಸಾವು ಸಂಭವಿಸಿದರೆ ಅದಕ್ಕೆ ಶಾಸಕ ಯತ್ನಾಳ ಹಾಗೂ ನಗರದ ಗಾಂಧಿ ಚೌಕ್ ಠಾಣೆ ಪಿಎಸ್ಐ ಶರಣಗೌಡ ಕಾರಣ ಎಂದು ಫೇಸ್‌ಬುಕ್‌ನಲ್ಲಿ ಸಂದೇಶ ಹಾಕಿ ಬಿಜೆಪಿ ಕಾರ್ಯಕರ್ತ ನಾಪತ್ತೆಯಾಗಿದ್ದಾನೆ. ಇಡೀ ಪ್ರಕರಣ ಬಿಜೆಪಿ ಪಾಳಯದಲ್ಲಿ ಸಂಚಲನ ಸೃಷ್ಟಿಸಿದೆ. ಬಾಬು ಜಗದಾಳೆ ಎಂಬ ಬಿಜೆಪಿ ಯುವ ಕಾರ್ಯಕರ್ತನೇ ಸ್ವಪಕ್ಷೀಯ ಶಾಸಕನ ವಿರುದ್ಧ ಜೀವ ಬೆದರಿಕೆ ಹಾಕಿ ನಾಪತ್ತೆಯಾದವರು. ವಿಜಯಪುರ ನಗರ ಕ್ಷೇತ್ರದ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹಾಗೂ ಅದೇ ಪಕ್ಷದ ಮಾಜಿ ಸಚಿವ ಅಪ್ಪು ಪಟ್ಟಣಶೆಟ್ಟಿ ಮಧ್ಯೆ ರಾಜಕೀಯ ಸಂಘರ್ಷ ತಾರಕಕ್ಕೇರಿದೆ. ಪರಿಣಾಮ ಅಪ್ಪು ಪಟ್ಟಣಶೆಟ್ಟಿ ಬೆಂಬಲಿಗ ಜಗದಾಳೆ ತನ್ನದೇ ಪಕ್ಷದ ಶಾಸಕ ಯತ್ನಾಳ ಜೀವಬೆದರಿಕೆ ಹಾಕಿದ್ದಾರೆಂಬ ಹಂತಕ್ಕೆ ಬಂದು ತಲುಪಿದೆ. ವಿಜಯಪುರ 'ಐ ವಾಂಟ್ ಜಸ್ಟಿಸ್' ಎಂದು ಫೇಸ್‌ಬುಕ್‌ನಲ್ಲಿ ವಿಡಿಯೋ ಪೋಸ್ಟ್ ಮಾಡಿದ ಬಾಬು ಜಗದಾಳೆ, ನನ್ನ ಜೀವ ಹೋದರೆ ಅದಕ್ಕೆ ಶಾಸಕ ಯತ್ನಾಳ, ಗಾಂಧಿ ಚೌಕ್ ಠಾಣೆ ಪಿಎಸ್ಐ ಶರಣಗೌಡ ಕಾರಣ ಎಂದು ಶನಿವಾರ ರಾತ್ರಿ ಸಂದೇಶ ಹಾಕಿದ್ದಾನೆ. ಪಿಎಸ್ಐ ಶರಣಗೌಡ ತನ್ನ ಮೇಲೆ ಹಲ್ಲೆ ನಡೆಸಿ, ಕೆಟ್ಟದ್ದಾಗಿ ನಿಂದಿಸಿದ್ದಾರೆ. ನನ್ನ ಮೇಲೆ ವಾಹನ ಅಪಘಾತ ಮಾಡುವ ಸಂಚು ನಡೆಯುತ್ತಿದೆ. ನಾಳೆ ನಿನ್ನ ಹೆಣಾ ಎತ್ಕೊಂಡು ಪ್ರತಿಭಟನೆ ಮಾಡ್ತಾರ, ಮತ್ತ ಹೋಗಿ ಮಕ್ಕೋತಾರ ಎಂದು ಪೋಸ್ಟ್ ಹಾಕಿರುವ ಬಾಬು, ನೀನೇನು ಅಂಬೇಡ್ಕರ್, ಸಂಗೊಳ್ಳಿ ರಾಯಣ್ಣನಿಗೆ ಹುಟ್ಟಿದ್ದೀಯಾ. ನಿನ್ನನ್ನು ಹುಚ್ಚು ನಾಯಿಗೆ ಹೊಡೆದಂತೆ ಹೊಡೆಯುತ್ತಾರೆ ಎಂದು ನಿಂದಿಸಿದ್ದಾಗಿ ಆರೋಪಿಸಿದ ವಿಡಿಯೋ ಹಾಕಿ ನಾಪತ್ತೆಯಾಗಿದ್ದಾನೆ. ಸದ್ಯ ಬಾಬು ಮೊಬೈಲ್ ಸ್ವಿಚ್ಡ್‌ಆಫ್ ಆಗಿದ್ದು, ವಿಡಿಯೋ ವೈರಲ್ ಆಗಿದೆ.